# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 31 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 19.12.2022 |
| ಉತ್ತರಿಸುವ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದಲ್ಲಿ ಆಯುಷ್ಮಾನ್ ಕಾರ್ಡ್ ಪ್ರಸ್ತುತ ಚಾಲ್ತಿಯಲ್ಲಿದೆಯೇ; ಸದರಿ ಕಾರ್ಡುದಾರರಿಗೆ ನೀಡುತ್ತಿರುವ ಸೌಲಭ್ಯಗಳೇನು; (ವಿವರ ನೀಡುವುದು) | ಕರ್ನಾಟಕ ರಾಜ್ಯದಲ್ಲಿ ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಕಾರ್ಡ್ ಪ್ರಸ್ತುತ ಚಾಲ್ತಿಯಲ್ಲಿದ್ದು, ಕಾರ್ಡುದಾರರಿಗೆ ಈ ಕೆಳಕಂಡ ಸೌಲಭ್ಯವನ್ನು ನೀಡಲಾಗುತ್ತಿದೆ.<br>1. ರಾಜ್ಯದ ಎಲ್ಲಾ ನಿವಾಸಿಗಳಿಗೂ / ನಾಗರಿಕರಿಗೂ ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯು ಸಾರ್ವತ್ರಿಕ ಆರೋಗ್ಯ ಯೋಜನೆಯಾಗಿದ್ದು (ಯಾವುದೇ ವಯಸ್ಸಿನ ನಿರ್ಬಂಧ ಇರುವುದಿಲ್ಲ), ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವ ಉದ್ದೇಶವನ್ನು ಹೊಂದಿರುತ್ತದೆ.<br>2. ಈ ಯೋಜನೆಯ ಫಲಾನುಭವಿಗಳನ್ನು ಅರ್ಹತಾ ರೋಗಿ ಮತ್ತು ಸಾಮಾನ್ಯ ರೋಗಿ ಎಂದು ಎರಡು ವರ್ಗಗಳಾಗಿ ವಿಂಗಡಿಸಲಾಗಿದೆ;<br><br>ಅರ್ಹತಾರೋಗಿ: ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ, 2013ರಡಿ (ಬಿಪಿಎಲ್) ಅರ್ಹ ಕುಟುಂಬಕ್ಕೆ ಸೇರಿರುವವರು ಹಾಗೂ ಈ ಹಿಂದೆ ಚಾಲ್ತಿಯಲ್ಲಿದ್ದ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯಡಿಯಲ್ಲಿ ನೋಂದಾಯಿತಗೊಂಡಿರುವ ಕುಟುಂಬಗಳಿಗೆ ಒಂದು ವರ್ಷಕ್ಕೆ ಒಂದು ಕುಟುಂಬಕ್ಕೆ ರೂ.5.00 ಲಕ್ಷಗಳವರೆಗೆ ಉಚಿತ ಚಿಕಿತ್ಸೆ ಒದಗಿಸಲಾಗುವುದು.<br><br>ಸಾಮಾನ್ಯರೋಗಿ: ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ, 2013ರಡಿ (ಎಪಿಎಲ್) ಅರ್ಹ ಕುಟುಂಬಕ್ಕೆ ಸೇರಿಲ್ಲದೇ ಇರುವವರು, ಇವರಿಗೆ ಸರ್ಕಾರಿ ಪ್ಯಾಕೇಜ್ ದರದ 30% ರಷ್ಟು ಇದ್ದು, ಸಹ-ಪಾವತಿಯ ಆಧಾರದ ಮೇಲೆ ಒಂದು ವರ್ಷಕ್ಕೆ ಒಂದು ಕುಟುಂಬಕ್ಕೆ ರೂ.1.50ಲಕ್ಷ ಇರುತ್ತದೆ.<br>3. ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯಡಿಯಲ್ಲಿ 1650 ನಿರ್ದಿಷ್ಟ ಚಿಕಿತ್ಸಾ ವಿಧಾನಗಳಿಗೆ (ಸಾಮಾನ್ಯ ದ್ವಿತೀಯ ಹಂತ, ಕ್ಲಿಷ್ಟಕರ ದ್ವಿತೀಯ ಹಂತ, ತೃತೀಯ ಹಂತ ಮತ್ತು ತುರ್ತು ಚಿಕಿತ್ಸಾ ವಿಧಾನಗಳು) ಚಿಕಿತ್ಸೆ ನೀಡಲಾಗುತ್ತದೆ.<br>4. ರೋಗಿಗಳು ತಮ್ಮ ಪಡಿತರ ಚೀಟಿ ಮತ್ತು ಆಧಾರ್ ಕಾರ್ಡ್ ನೊಂದಿಗೆ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಹೋಗಿ ತಪಾಸಣೆ ಮಾಡಿಸಿಕೊಳ್ಳಬೇಕು. ಅದೇ ಸರ್ಕಾರಿ ಆಸ್ಪತ್ರೆಯು ಚಿಕಿತ್ಸೆ ನೀಡುವ ಸಾಮರ್ಥ್ಯ ಹೊಂದಿದ್ದರೆ ಅಲ್ಲಿಯೇ ರೋಗಿಗೆ ಚಿಕಿತ್ಸೆ ನೀಡಲಾಗುವುದು.<br>5. ಸಾಮಾನ್ಯ ದ್ವಿತೀಯ ಹಂತದ ಚಿಕಿತ್ಸೆಗಳನ್ನು ಸರ್ಕಾರಿ ಸ್ವಾಮ್ಯದ ಆಸ್ಪತ್ರೆಗಳಲ್ಲಿಯೇ ನಿರ್ವಹಿಸಬೇಕಾಗಿದ್ದು, ಇದರ ಚಿಕಿತ್ಸೆಗಳನ್ನು ಸರ್ಕಾರಿ ಆಸ್ಪತ್ರೆಗಳಿಗೆ ನಿರ್ಬಂಧಿಸಿದೆ ಮತ್ತು ಸ್ವಯಂಚಾಲಿತ ಅನುಮೋದನೆ ನೀಡಲಾಗುತ್ತದೆ.<br>6. ಕ್ಲಿಷ್ಟಕರ ದ್ವಿತೀಯ ಹಂತದ ಚಿಕಿತ್ಸೆಗಳಿಗೆ ಫಲಾನುಭವಿಗಳು ಸರ್ಕಾರಿ ಆಸ್ಪತ್ರೆಗಳನ್ನು ಸಂಪರ್ಕಿಸಬೇಕಾಗಿದ್ದು, ಸಮರ್ಥತೆ ಹಾಗೂ ಸಾಮರ್ಥ್ಯದ ಅನುಗುಣವಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೈಗೊಳ್ಳಬಹುದಾಗಿದ್ದು, ಇದರ ಪ್ರಕ್ರಿಯೆ ಸ್ವಯಂಚಾಲಿತ ಅನುಮೋದನೆಯಾಗಿರುತ್ತದೆ. ಒಂದು ವೇಳೆ ಸರ್ಕಾರಿ ಆಸ್ಪತ್ರೆಗಳಲ್ಲಿ ಸಮರ್ಥತೆ ಹಾಗೂ ಸಾಮರ್ಥ್ಯವಿಲ್ಲದಿದ್ದಲ್ಲಿ ರೆಫರಲ್ ಮೂಲಕ ಉನ್ನತ ಮಟ್ಟದ ಸರ್ಕಾರಿ ಆಸ್ಪತ್ರೆ ಅಥವಾ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೈಗೊಳ್ಳಬಹುದಾಗಿದೆ. |

| | | |
|---|---|---|
| | | 7. ತೃತೀಯ ಹಂತದ ಚಿಕಿತ್ಸಾ ವಿಧಾನಗಳಿಗೆ ಸರ್ಕಾರಿ ಆಸ್ಪತ್ರೆಗಳನ್ನು ಸಂಪರ್ಕಿಸಬೇಕಾಗಿದ್ದು, ಸರ್ಕಾರಿ ಆಸ್ಪತ್ರೆಗಳಲ್ಲಿ ಸಮರ್ಥತೆ ಹಾಗೂ ಸಾಮರ್ಥ್ಯವಿಲ್ಲದಿದ್ದಲ್ಲಿ ರೆಫರಲ್ ಮೂಲಕ ಉನ್ನತ ಮಟ್ಟದ ಸರ್ಕಾರಿ ಆಸ್ಪತ್ರೆ ಅಥವಾ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೈಗೊಳ್ಳಬಹುದಾಗಿದೆ.<br>8. ತುರ್ತು ಚಿಕಿತ್ಸಾ ವಿಧಾನದ ಕಾಯಿಲೆಗಳ ಚಿಕಿತ್ಸೆಗಾಗಿ ಯಾವುದೇ ರೆಫರಲ್ ಇಲ್ಲದೆ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದಾಗಿದೆ. ಈ ತರಹದ ರೋಗಿಗಳಿಗೆ ಸಮಯೋಚಿತ ಚಿಕಿತ್ಸಾ ವಿಧಾನವನ್ನು ಪ್ರಾರಂಭಿಸಿ ಆ ನಂತರ 24 ಗಂಟೆಗಳೊಳಗೆ ಪೂರ್ವಾನುಮತಿಗೆ ಸಲ್ಲಿಸುವ ವಿಧಾನವನ್ನು ಕಲ್ಪಿಸಿದ್ದು, 169 ಚಿಕಿತ್ಸಾ ವಿಧಾನಗಳನ್ನು ಗುರುತಿಸಲಾಗಿದೆ. |
| ಆ) | ರಾಜ್ಯದಲ್ಲಿ ಎಷ್ಟು ಕಾರ್ಡುಗಳು ಇವೆ: ದಕ್ಷಿಣಕನ್ನಡ, ಉಡುಪಿ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಎಷ್ಟು ಕಾರ್ಡುಗಳು ಇವೆ: (ವಿವರ ನೀಡುವುದು) | ಸಂಯೋಜಿತ ಆಯುಷ್ಮಾನ್ ಭಾರತ್ ಪ್ರಧಾನಮಂತ್ರಿ ಜನಾರೋಗ್ಯ ಯೋಜನಾ-ಆರೋಗ್ಯ ಕರ್ನಾಟಕ ಗುರುತಿನ ಚೀಟಿಗಳನ್ನು ಇದುವರೆಗೆ 1.2 ಕೋಟಿ ಫಲಾನುಭವಿಗಳಿಗೆ ವಿತರಿಸಲು ದಾಖಲಿಸಲಾಗಿರುತ್ತದೆ. ಇವರೆಲ್ಲರಿಗೂ ಕಾರ್ಡ್ ಮುದ್ರಿಸಿ ವಿತರಿಸುವ ಕಾರ್ಯಕ್ರಮ ಜಾರಿಯಲ್ಲಿರುತ್ತದೆ. ವಿವರಗಳು ಈ ಕೆಳಕಂಡಂತಿರುತ್ತವೆ.<br>ದಕ್ಷಿಣಕನ್ನಡ - 4,51,955<br>ಉಡುಪಿ - 4,30,849<br>ಶಿವಮೊಗ್ಗ - 4,67,730 |
| ಇ) | ಹೊಸ ಕಾರ್ಡ್ ಬಂದಿವೆಯೇ; ಹೊಸ ಕಾರ್ಡ್‌ಗೆ ಅನುಮೋದನೆ ಆಗಿದೆಯೇ; (ವಿವರ ನೀಡುವುದು) | ಹೌದು ಹೊಸ ಕಾರ್ಡ್ ಸೃಜಿಸಲಾಗುತ್ತಿದೆ. ಇದುವರೆಗೂ 1.2 ಕೋಟಿ ಫಲಾನುಭವಿಗಳ ದಾಖಲೆ ಮಾಡಲಾಗಿದೆ ಉಳಿದವರ ದಾಖಲಾತಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. |
| ಈ) | ಹಳೇ ಆಯುಷ್ಮಾನ್ ಕಾರ್ಡು ರದ್ದಾಗಿ ಹೊಸ ಕಾರ್ಡ್ ಸಿಗದೇ ಫಲಾನುಭವಿಗಳಿಗೆ ರಿಯಾಯಿತಿ ದರದ ಆರೋಗ್ಯ ಸೇವೆ ಸಿಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಈ ಕುರಿತು ಸರ್ಕಾರ ಕೈಗೊಂಡ ಕ್ರಮವೇನು: (ವಿವರ ನೀಡುವುದು) | ಹಳೇ ಆಯುಷ್ಮಾನ್ ಕಾರ್ಡು ಈವರೆಗೆ ಚಾಲ್ತಿಯಲ್ಲಿದ್ದು, ರದ್ದಾಗಿರುವುದಿಲ್ಲ. ಈ ಕುರಿತಂತೆ ಎಲ್ಲಾ ಆಸ್ಪತ್ರೆಗಳಿಗೆ ಮತ್ತು ನಿಯಂತ್ರಣ ಕಛೇರಿಗಳಿಗೆ ಸುತ್ತೋಲೆ ಹೊರಡಿಸಲಾಗಿರುತ್ತದೆ (ಪ್ರತಿ ಅನುಬಂಧದಲ್ಲಿರಿಸಿದೆ) |
| ಉ) | ಎಲ್ಲರಿಗೂ ಚಾಲ್ತಿಯಲ್ಲಿರುವ ಹೊಸ ಆರೋಗ್ಯ ಕಾರ್ಡ್ ನೀಡಲು ಸರ್ಕಾರ ಕೈಗೊಂಡ ಕ್ರಮವೇನು: (ವಿವರ ನೀಡುವುದು) | ರಾಜ್ಯದಲ್ಲಿ ಎಲ್ಲರಿಗೂ ನೂತನ ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನಾರೋಗ್ಯ ಯೋಜನಾ- ಆರೋಗ್ಯ ಕರ್ನಾಟಕ ಗುರುತಿನ ಚೀಟಿಗಳನ್ನು ಸೃಜಿಸಿ ಮುದ್ರಿಸಿ ಕೊಡಲು ವಿದ್ಯುನ್ಮಾನ ನಾಗರೀಕ ಸೇವಾ ವಿತರಣಾ ನಿರ್ದೇಶನಾಲಯಕ್ಕೆ ಸರ್ಕಾರವು ಅನುಮತಿ ನೀಡಿರುತ್ತದೆ. ಅವರು ತಮ್ಮ ಅಧೀನದಲ್ಲಿರುವ ಗ್ರಾಮ-1, ಬೆಂಗಳೂರು-1, ಕರ್ನಾಟಕ-1, ಜನ ಸೇವಕ ಕೇಂದ್ರಗಳ ಮೂಲಕ ಫಲಾನುಭವಿಗಳ ಗುರುತಿನ ಚೀಟಿ ಸೃಜನೆ ಮಾಡುವ ಕಾರ್ಯದಲ್ಲಿ ತೊಡಗಿರುತ್ತಾರೆ. ಇದಲ್ಲದೇ ನಗರ ಪ್ರದೇಶಗಳಲ್ಲಿ ಗುರುತಿನ ಚೀಟಿ ಸೃಜನೆ ಮಾಡಲು ಭಾರತ ಸರ್ಕಾರದಿಂದ ಅಂಗೀಕೃತ Smart IT ಸಂಸ್ಥೆಗೆ ಅನುಮತಿ ನೀಡಲಾಗಿರುತ್ತದೆ.<br><br>ಇವರೆಲ್ಲರೂ ರಾಜ್ಯದ ಫಲಾನುಭವಿಗಳಿಗೆ ಉಚಿತ ಆಕರ್ಷಕ Portability ಸೌಲಭ್ಯ ಹೊಂದಿರುವ ಮತ್ತು ಆಯುಷ್ಮಾನ್ ಭಾರತ್ ಆರೋಗ್ಯ ಖಾತೆಯ ಗುರುತಿನ ಸಂಖ್ಯೆಗಳನ್ನು ಹೊಂದಿರುವ ಕಾರ್ಡ್ ನೀಡುವಲ್ಲಿ ತೊಡಗಿರುತ್ತಾರೆ. |

**ಕಡತ ಸಂಖ್ಯೆ: ಆಕುಕ 152 ಎಸ್.ಬಿ.ವಿ. 2022**

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 31 ಕ್ಕೆ ಅನುಬಂಧ

ಕಛೇರಿ : +91 80 2335 4039
+91 80 2335 4085
ಇ-ಮೇಲ್ : com-hfws@karnataka.gov.in

ಕರ್ನಾಟಕ ಸರ್ಕಾರ

# ಆಯುಕ್ತಾಲಯ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಸಂಖ್ಯೆ: ಹೆಚ್‌ಎಫ್‌ಡಬ್ಲ್ಯು/ಎಆರ್‌ಕೆ/80/2019 -20
E Office No. E667310

ದಿನಾಂಕ: 19-09-2022

**ಅಧಿಕೃತ ಸುತ್ತೋಲೆ**

**ವಿಷಯ:** ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನಾರೋಗ್ಯ ಯೋಜನೆ- ಆರೋಗ್ಯ ಕರ್ನಾಟಕ ಗುರುತಿನ ಚೀಟಿ ಸೃಜನೆ ಕುರಿತು.

**ಉಲ್ಲೇಖ:** 1. ಮಾನ್ಯ ಆರೋಗ್ಯ ಸಚಿವರ ನಿರ್ದೇಶನ.
2. ಸಮ ಸಂಖ್ಯೆ ಸುತ್ತೋಲೆ ದಿ:05-09-2022

******

ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನಾರೋಗ್ಯ ಯೋಜನೆ-ಆರೋಗ್ಯ ಕರ್ನಾಟಕ (AB-PMJAY-ArK) ಗುರುತಿನ ಚೀಟಿಗಳನ್ನು ಜಿಲ್ಲೆಗಳಲ್ಲಿರುವ ಎಲ್ಲಾ ಫಲಾನುಭವಿಗಳಿಗೆ, ಡಿಸೆಂಬರ್ 15 ರೊಳಗಾಗಿ 100% ಗುರುತಿನ ಚೀಟಿಗಳನ್ನು ಸೃಜನೆ ಮಾಡಿ, ವಿತರಿಸಲು ಸಿದ್ಧವಾಗಿರುವಂತೆ ಈ ಹಿಂದೆ ದಿನಗಳಲ್ಲಿ ಸೂಚಿಸಲಾಗಿದ್ದಿತು. ಜನಾರೋಗ್ಯ ಮತ್ತು ಆಯುಷ್ಮಾನ್ ಭಾರತ್ ಕಾರ್ಯಕ್ರಮದ ಹಿತದೃಷ್ಟಿಯಿಂದ ಹಿಂದಿನ ಸುತ್ತೋಲೆಗೆ ಪೂರಕವಾಗಿ ಕೆಳಗಿನ ಮಾರ್ಗಸೂಚಿಗಳನ್ನು ನೀಡಲಾಗಿದೆ.

1. ಮಧ್ಯಂತರ ಗುರಿಯಾಗಿ ಅಕ್ಟೋಬರ್ 2ನೇ ತಾರೀಖಿನ ಒಳಗಾಗಿ ಎಲ್ಲಾ ಜಿಲ್ಲೆಗಳು ರಾಜ್ಯದ ಮಧ್ಯಂತರ ಗುರಿಯಾದ 1ಕೋಟಿ ಗುರುತಿನ ಚೀಟಿ ಸೃಜನೆ ಪೂರೈಸುವುದು.
2. ಬಳ್ಳಾರಿ, ರಾಯಚೂರು, ಯಾದಗಿರಿ, ಚಿಕ್ಕಮಗಳೂರು, ಧಾರವಾಡ, ಬೆಂಗಳೂರು (ಗ್ರಾ), ತುಮಕೂರು, ಕೊಪ್ಪಳ, ಚಿತ್ರದುರ್ಗ, ಮೈಸೂರು, ಬಾಗಲಕೋಟೆ, ಹಾಸನ, ಬೆಳಗಾವಿ, ಕೋಲಾರ, ಕಲುಬುರ್ಗಿ, ದಕ್ಷಿಣ ಕನ್ನಡ, ಕೊಡಗು, ರಾಮನಗರ, ವಿಜಯಪುರ, ಮಂಡ್ಯ, ಶಿವಮೊಗ್ಗ ಈ ಜಿಲ್ಲೆಗಳ ಇದುವರೆಗಿನ ಶೇಕಡವಾರು ಪ್ರಗತಿ 1 ಅಂಕಿಯದ್ದಾಗಿದ್ದು, ಜಿಲ್ಲೆಗಳ ಅಧಿಕಾರಿಗಳು, ಉಳಿದ 10 ದಿನಗಳಲ್ಲಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಚಿಸಿದೆ.
3. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಹೆಚ್ಚಿನ ಪ್ರಗತಿ ಸಾಧಿಸಲು ಪೂರಕ ವಾತವರಣ ಇರುವುದರಿಂದ ತಮ್ಮ ಗುರಿಯಾದ 10,62,790 ಫಲಾನುಭವಿಗಳಿಗೆ ಇದುವರೆಗೆ 90,691 ಗುರುತಿನ ಚೀಟಿಗಳನ್ನು ಮಾತ್ರ ಸೃಜಿಸಲಾಗಿದ್ದು, ದಿ:02-10-2022 ರೊಳಗಾಗಿ ತಮ್ಮ ಎಲ್ಲಾ ಗುರಿಯನ್ನು ತಲುಪುವ ದಿಕ್ಕಿನತ್ತ ಕಾರ್ಯಕ್ರಮ ಹಮ್ಮಿಕೊಳ್ಳಲು ಕಟ್ಟುನಿಟ್ಟಾಗಿ ಸೂಚಿಸಿದೆ.
4. ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆ, ಸಾರ್ವಜನಿಕ ಆಸ್ಪತ್ರೆ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳ ಆವರಣದಲ್ಲಿ AB-PMJAY-ArK ಮತ್ತು ABHA ಗುರುತಿನ ಚೀಟಿಗಳನ್ನು ಸಿದ್ಧಪಡಿಸುವ ಕೇಂದ್ರಗಳನ್ನು ಈ ಕೂಡಲೇ ಸ್ಥಾಪಿಸಲು, ಜಿಲ್ಲೆಯ EDCS ನ DPM ರವರನ್ನು ಸಂಪರ್ಕಿಸಿ ಅಗತ್ಯ ಕ್ರಮ ಕೈಗೊಂಡು ವರದಿಮಾಡುವುದು.
5. ಈಗಾಗಲೇ ವಿತರಿಸಲಾಗಿರುವ ಆಭಾ-ಆಕ ಗುರುತಿನ ಚೀಟಿಗಳು ಫಲಾನುಭವಿಗಳಿಗೆ ಚಿಕಿತ್ಸೆ ನೀಡಲು **ಊರ್ಜಿತವಾಗಿರುತ್ತವೆ** ಎಂದು ಈ ಮೂಲಕ ತಿಳಿಯಪಡಿಸಿದೆ. ಹಳೆಯ ಗುರುತಿನ ಚೀಟಿಗಳೆಂದು ಯಾವುದೇ ಫಲಾನುಭವಿಗೆ ಚಿಕಿತ್ಸೆ ನೀಡದೆ ತಿರಸ್ಕರಿಸುವಂತಿಲ್ಲ ಮತ್ತು ಚಿಕಿತ್ಸೆಗಾಗಿ ಹೊಸ ಗುರುತಿನ ಚೀಟಿ ತರಲು ನಿರ್ಬಂದಿಸುವಂತಿಲ್ಲ ಎಂದು ಜಿಲ್ಲೆಗಳ ಎಲ್ಲಾ ಚಿಕಿತ್ಸಾ ಸಂಸ್ಥೆಗಳಿಗೆ ಸೂಚಿಸಿದೆ.

20/9/22

6. ನೂತನ AB-PMJAY-ArK ಗುರುತಿನ ಚೀಟಿಗಳನ್ನು ಸೃಜಿಸುವ ಈ ಸಂಕ್ರಮಣ ಕಾಲದಲ್ಲಿ ಕೆಲವು ಫಲಾನುಭವಿಗಳು ತುರ್ತು ಅಥವಾ ಅಪಘಾತ ಚಿಕಿತ್ಸೆಗೆ ಆಗಮಿಸಿದಾಗ, ಅವರ ಬಳಿ ಗುರುತಿನ ಚೀಟಿ ಲಭ್ಯವಿಲ್ಲದೆ, ಪಡಿತರ ಚೀಟಿ Seeded ಆಧಾರ್ ಕಾರ್ಡ್ ಇದ್ದರೆ, ಅವರಿಗೆ ರೆಫರಲ್ ಅವಶ್ಯಕತೆ ಇದ್ದರೆ ORS ಬದಲಿಗೆ ಹಸ್ತಪ್ರತಿಯ ರೆಫರಲ್ ನೀಡಲು ಮುಂದೆ ತಿಳಿಸುವ ವರೆಗೆ ಸೀಮಿತ ಅವಧಿಗೆ ಅನುಮತಿ ನೀಡಿದೆ.

20/9/22

(ರಂದೀಪ್ ಡಿ, ಐ.ಎ.ಎಸ್.)
ಆಯುಕ್ತರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

19.9.22

**ಇವರಿಗೆ,**

1. ಎಲ್ಲಾ ಜಿಲ್ಲಾ ಆ.ಕು.ಕ ಅಧಿಕಾರಿಗಳು,
2. ಎಲ್ಲಾ ಜಿಲ್ಲಾ ಶಸ್ತ್ರ ಚಿಕಿತ್ಸಕರು, ಮತ್ತು ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿಗಳು,
3. ಎಲ್ಲಾ ತಾಲ್ಲೂಕು ಆರೋಗ್ಯಾಧಿಕಾರಿಗಳು,
4. ಎಲ್ಲಾ ತಾಲ್ಲೂಕು ಆಸ್ಪತ್ರೆ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳು-ತಾಲ್ಲೂಕು ಆರೋಗ್ಯಾಧಿಕಾರಿಗಳ ಮುಖಾಂತರ

**ಪ್ರತಿಯನ್ನು:**

1. ಅಪರ ಕಾರ್ಯದರ್ಶಿಗಳ ಮುಖಾಂತರ ಮಾನ್ಯ ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರ ಅವಗಾಹನೆಗೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರ ಅವಗಾಹನೆಗೆ.
3. ಕಾರ್ಯಕಾರಿ ನಿರ್ದೇಶಕರು, SAST ಇವರಿಗೆ ಕಳುಹಿಸುತ್ತಾ ಆಭಾ-ಆಕ ಹಳೆಯ ಗುರುತಿನ ಚೀಟಿ ಮತ್ತು ಹಸ್ತಾಕ್ಷರ ರೆಫರಲ್‌ನ್ನು ಮಾನ್ಯ ಮಾಡುವಂತೆ ಎಲ್ಲಾ ಆಭಾ-ಆಕ ನೋಂದಾಯಿತ ಖಾಸಗಿ ಆಸ್ಪತ್ರೆಗಳಿಗೆ ತಿಳಿಸಲು ಕೋರಿದೆ.
4. ನಿರ್ದೇಶಕರು, EDCS ರವರಿಗೆ ಕಳುಹಿಸುತ್ತಾ ಸಾರ್ವಜನಿಕ ಆಸ್ಪತ್ರೆಗಳ ಆವರಣದಲ್ಲಿ AB-PMJAY-ArK ಗುರುತಿನ ಚೀಟಿಗಳ ನೋಂದಾವಣೆ ಕೇಂದ್ರಗಳನ್ನು ತೆರೆಯುವಂತೆ ಕೋರಿದೆ.
5. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು
6. ಎಲ್ಲಾ ಜಿಲ್ಲಾ ಪಂಚಾಯತ್ ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
7. ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿಗಳು ಮತ್ತು ಆಭಾ-ಆಕ ನಿಯೋಜಿತ ಅಧಿಕಾರಿಗಳು, ಅಗತ್ಯ ಕ್ರಮಕ್ಕಾಗಿ ಮತ್ತು ವರದಿಗಾಗಿ.

20/9/22